ಸರ್ಜನ್ ವೈದ್ಯರಂತೆ, ಮೂಗಿಗೆ ಬಟ್ಟೆ ಕಟ್ಟಿಕೊಂಡು ಮನೆಯ ಹಿರಿಯರು ಉದ್ದಕೋಲಿಗೆ ಕಸಪೊರಕೆ ಕಟ್ಟಿ, ಧೂಳು ಜಾಡಿಸತೊಡಗುತ್ತಿದ್ದರೆ, ಅದೇ ವೇಳೆಗೆ ನಾವೆಲ್ಲ ಹುಡುಗರು ಉತ್ಖನನ ಕಾರ್ಯಕ್ಕೆ ಟೊಂಕ ಕಟ್ಟುತ್ತಿದ್ದೆವು.

ಬ್ರಿಟಿಷ್ ಕಾಲದ ಅಠಾರಾ ಕಚೇರಿ ನೆನಪಿಸುವಂತಿದ್ದ ನಮ್ಮ ಹಳ್ಳಿ ಮನೆಗೆ, ಶ್ರೇಣೀಕೃತ ಮೇಲ್ಛಾವಣಿ ಭೂಷಣಪ್ರಾಯವಾಗಿತ್ತು. ಮನೆಯ ಮುಂಭಾಗದಲ್ಲಿ ಗಚ್ಚಿನ, ಅದರ ಹಿಂದೆ ಕೆಂಪು ಮಂಗಳೂರು ಹೆಂಚಿನ, ತೀರ ಹಿಂಭಾಗಕ್ಕೆ ಲೋಕಲ್ ಕಪ್ಪು ಹೆಂಚಿನ ಛಾವಣಿ. ಇಪ್ಪತ್ತು ಬೈ ಮೂವತ್ತಡಿಯ ಮೂರಂಕಿನ ಮೇಲಟ್ಟ ಮನೆಯ ಮಧ್ಯದ ಅರ್ಧಭಾಗ ಆವರಿಸಿಕೊಂಡಿತ್ತು. ಇಲ್ಲಿ ದಾಳಿಯಿಡುತ್ತಿದ್ದ ನಮ್ಮ ಬಾಲಸೈನ್ಯಕ್ಕೆ ಆವಾಗಲೇ ಕಾಲಕೋಶದಲ್ಲಿ ಹುದುಗಿಹೋಗಿರುವ ಅವಶೇಷಗಳ ಮರುದರ್ಶನ, ಮಧುರ ಸ್ಪರ್ಶ. ಮುಚ್ಚಳ ಕಳೆದುಹೋಗಿರುವ ಅಜ್ಜನ ಎಲೆ ಅಡಕೆಯ ಹಿತ್ತಾಳೆ ಡಬ್ಬಿ, ಒಂದಕಾಲತ್ತಿಲ್ ಅಪ್ಪನ ಬಾಲ್ಯಸಂಗಾತಿಯಾಗಿದ್ದ, ಈಗ ಬಣ್ಣಗೇಡಿಯಾಗಿರುವ ಬುಗುರಿ, ಎಂದೋ ಬಾದಾಮಿ ಜಾತ್ರೆಯಲ್ಲಿ ಕೊಂಡುತಂದಿದ್ದ, ನಂತರ ನಮ್ಮ ಅಮಾನುಷ ದಾಳಿಗೆ ಅಂಗವಿಕಲಗೊಂಡ ಸುಂದರ ಮಾಟದ ಹೆಣ್ಗೊಂಬೆ, ಹಿಂದಿನ ವರ್ಷವೋ ಅದರ ಹಿಂದಿನ ವರ್ಷವೋ ನಮ್ಮೂರ ಕಾಡಪ್ಪನ ಜಾತ್ರೆಯಲ್ಲಿ ಖರೀದಿಸಿದ್ದ, ಮುಂದೆ ವಾರೊಪ್ಪತ್ತಿನಲ್ಲಿ ಅಪ್ಪಚ್ಚಿಯಾಗಿ ಹೋಗಿದ್ದ ತಗಡಿನ ತುತ್ತೂರಿ, ಕಟ್ಟಿಗೆಯ ಆ ಜಾದೂಡಬ್ಬಿ ಇ... ಇ... ಪ್ರಿಯವಸ್ತುಗಳಿಗೆಲ್ಲ ಮೇಲಟ್ಟದಲ್ಲಿ ಪುನರ್ವಸತಿ ಕಲ್ಪಿಸಲಾಗಿರುತ್ತಿತ್ತು.

ಕಳೆದೇ ಹೋದವೆಂದು ಭಾವಿಸಿದ್ದ ಕೆಲ ಅಪರೂಪದ ವಸ್ತುಗಳು ಸಿಕ್ಕು ಧರ್ಮದರ್ಶನ ನೀಡುತ್ತಿದ್ದಂತೆ, ಜೀವದಾನ ಪಡೆದ ಬ್ಯಾಟ್ಸಮನ್‌ನ ಖುಷಿ ನಮಗೆಲ್ಲ. ಆಗ ಅವುಗಳ ತಪಶೀಲನೆ. ಕೆಲವುಗಳನ್ನು ಡಿಸ್ಚಾರ್ಜ್ ಮಾಡಲು ಮನಸ್ಸು ಬಾರದೆ ಉಳಿಸಿಕೊಂಡರೆ, ಚಾರ್ಮು–ಫಾರ್ಮು ಕಳೆದುಕೊಂಡ ಕ್ರಿಕೆಟಿಗನಂತಿದ್ದವುಗಳಿಗೆ, ಇನ್ನುಳಿದವುಗಳಿಗೆ ದಯಾಮರಣ ಅನಿವಾರ್ಯವಾಗುತ್ತಿತ್ತು.

ಸುಣ್ಣ ಬಳಿಯಲೆಂದು ಆ ದಿನ ಬೆಳಗ್ಗೆಯೇ ಬಂದಿರುತ್ತಿದ್ದ ತೋಟದಾಳು ಹಣ್ಮಂತಪ್ಪ ಮತ್ತಿಬ್ಬರು ಆಳುಮಕ್ಕಳಿಗೆ ಮೊದಲು ಉಪ್ಪಿಟ್ಟು–ಚಹಾದ ನಾಷ್ಟಾ. ಅದಾದ ಮೇಲೆ ಅವರು ಎಡಗೈಯಲ್ಲಿ ಸುಣ್ಣದ ನೀರು ತುಂಬಿದ ಪಾತ್ರೆ, ಬಲಗೈಗೆ ಸಿಂಧಿ ಹುಲ್ಲಿನ ಕಸಬರಿಗೆಯೊಂದಿಗೆ ಮನೆಯ ಒಂದೊಂದು ಭಾಗಕ್ಕೆ ಸುಣ್ಣ ಬಳೆಯಲು ಸುರುವಿಡುತ್ತಿದ್ದರು.

‘ಎಲ್ಲದರಲ್ಲೂ ನಂದೊಂದಿಷ್ಟು ಅಕ್ಕಿಕಾಳು ಇರಲಿ’ ಎಂಬ ಉಪದ್ವ್ಯಾಪಿ ಸ್ವಭಾವದ ನಾವು ಈ ಸಮಯದಲ್ಲಿ ಸುಮ್ಮನೆ ಕುಳಿತಿರುವುದೆಂದರೆ... ಅದು ನಮ್ಮ ಸೃಜನಶೀಲತೆಗೆ ಅವಮಾನವಲ್ಲವೆ! ತಡಮಾಡದೆ, ಮೊಂಡಾದ ಕಸಬರಿಕೆಯೋ, ಆಕಾರ ಕಳೆದುಕೊಂಡ ಬ್ರಶ್ಶೋ ಎಂಥದ್ದೊ ಒಂದು ಆ ತುರ್ತುಸ್ಥಿತಿಯಲ್ಲಿ ಕೈಗೆ ಸಿಕ್ಕಿದ್ದನ್ನು ಎತ್ತಿಕೊಂಡು, ಸುಣ್ಣದ ಪಾತ್ರೆಯಲ್ಲಿ ಎದ್ದೆದ್ದಿ, ಸಿಕ್ಕ ಸಿಕ್ಕ ಕಡೆಯಲೆಲ್ಲ ಸುಣ್ಣ–ಪ್ರಯೋಗ (ದುರುಪಯೋಗ) ನಡೆಸುತ್ತಿದ್ದೆವು.

‘ನಿಮ್ದು ಅತೀಯಾತರ‍್ಯಪಾ...’ ಎಂದು ಮನೆಯ ಹಿರಿಯರು ಸಿಟ್ಟಿನಿಂದ ಗುರಾಯಿಸಲಾರಂಭಿಸಿದಂತೆ, ಇನ್ನು ಇಲ್ಲಿದ್ದರೆ ಸುಖವಿಲ್ಲವೆಂದೆನಿಸಿ, ಅಲ್ಲಿಂದ ಹೊರಬೀಳುತ್ತಿದ್ದೆವು. ಹೀಗೆ ಕಾರ್ಯಕ್ಷೇತ್ರ ವಿಸ್ತರಿಸಿಕೊಂಡು, ಹೊರಗೋಡೆಯ ಮೇಲೆ ‘ದೀಪಾವಳಿ ಶುಭಾಶಯಗಳು’, ‘ಶುಭ–ಲಾಭ’ ಮುಂತಾಗಿ ಸಾಂದರ್ಭಿಕ ಸಂದೇಶಗಳನ್ನು ಅಂಕುಡೊಂಕು ಹಸ್ತಾಕ್ಷರಗಳಲ್ಲಿ ಇಳಿಸುತ್ತಿದ್ದಂತೆ, ಮಹಾನ್ ಸಾಧನೆಗೈದ ಉಮ್ಮೇದಿ ಮನದೊಳಗೆ.

‘ಏನಪಾ, ಗ್ವಾಡಿಗೆ ಸುಣ್ಣಾ ಹಚ್ಚತ್ತಿದ್ಯೊ... ಇಲ್ಲಾ ನಿನ್ ಮೈಗೆ ಬಳ್ಕೊತ್ತಿದ್ಯೊ!’ ಎಂದು ಹಾದಿಯಲ್ಲಿ ಹೋಗುವವರು ಕೇಳುವಂತಿರುತ್ತಿತ್ತು ಆವಾಗಿನ ನಮ್ಮ ಅವತಾರ. ಹಣ್ಮಂತಪ್ಪ ಮತ್ತವನ ಮಕ್ಕಳಿಬ್ಬರು ಸೇರಿ ಮಧ್ಯಾಹ್ನ ಎರಡು–ಎರಡೂವರೆ ಹೊತ್ತಿಗೆ ಮನೆಯೊಳಗೆ ಸುಣ್ಣ ಹಚ್ಚುವ ಕೆಲಸ ಮುಗಿಸುತ್ತಿದ್ದಂತೆ, ಅಷ್ಟೊತ್ತಿಗೆ ನಮ್ಮ ‘ಸುಣ್ಣಾಟ’ದ ಎರಡನೆಯ ಅಂಕಕ್ಕೆ ತೆರೆಬಿದ್ದಿರುತ್ತಿತ್ತು.

ಮತ್ತೊಂದು ರೌಂಡ್ ನಾಷ್ಟಾ–ಚಹಾ ಸೇವೆಯಾದ ಮೇಲೆ, ಹಾಸಿಗೆ ಒಗೆದುಕೊಂಡು ಬರುವ ಮೂರನೆಯ ಅಂಕ ಸುರುವಿಡುತ್ತಿತ್ತು. ವರ್ಷದ ಹನ್ನೆರಡು ತಿಂಗಳೂ ಆಗ ತುಂಬಿ ಹರಿಯುತ್ತಿದ್ದ ಊರ ಹೊರಗಿನ ಹಳ್ಳದತ್ತ ಕಾಲ್ನಡಿಗೆ ಪ್ರಯಾಣ. ಆಗಿನ್ನೂ ಬಕೆಟ್‌ಗಳೂ ಹುಟ್ಟಿಕೊಂಡಿರಲಿಲ್ಲವಾದ್ದರಿಂದ, ದೊಡ್ಡ ದೊಡ್ಡದಾದ ದುಂಡಗಿನ ಕಬ್ಬಿಣದ ಬುಟ್ಟಿಗಳನ್ನು ವಗೂನಕ್ಕೆ ಬಳಸುತ್ತಿದ್ದರು. ಈ ಬುಟ್ಟಿಗಳಲ್ಲಿ ಹಾಕಿದ ವಾಸಿಂಗ್ ಸೋಡಾ ನೀರಲ್ಲಿ ಕೌದಿ–ಕಂಬಳಿ ಮುಂತಾದ ದಪ್ಪನೆಯ ಹಾಸಿಗೆಗಳಿಗೆ ಕಚ–ಕಚ ಕಾಲು ತುಳಿತ. ಆನಂತರ ಹಳ್ಳದ ಹರಿವ ನೀರಿನಲ್ಲಿ ಉದ್ದಕ್ಕೆ ಅವನ್ನು ತೇಲಿಬಿಟ್ಟು, ಮತ್ತೆ ಝುಟ ಫಟಂತ ಜಾಡಿಸಿಯಾದ ಮೇಲೆ ಇಬ್ಬಿಬ್ಬರು ಅವುಗಳ ಆ ತುದಿ ಈ ತುದಿ ಹಿಡಿದು ಜೋರಾಗಿ ಹಿಂಡಿ, ಮತ್ತೊಮ್ಮೆ ಜಾಡಿಸಿ, ಹಳ್ಳದ ದಂಡೆಯ ಕಲ್ಲುಕುಟರೆಯ ಮೇಲೆ ಒಣಗ ಹಾಕುತ್ತಿದ್ದರು. ಮಸಿ ಅರಿವೆ, ಚಿಂದಿಪಂದಿಗಳಾದಿ ಮನೆಯ ಸಕಲ ಬಟ್ಟೆ–ಬಳಗಕ್ಕೆ ಅವುಗಳ ದಿನದ ಭವಿಷ್ಯನಲ್ಲಿ ಆವತ್ತು ‘ಜಲದರ್ಶನ ಭಾಗ್ಯ, ನರಮಾನವರಿಂದ ಹಿಂಸೆ’ ಎಂದಿರುತ್ತಿತ್ತೇನೊ! ಅಂತೂ, ನಮ್ಮ ಅಮೃತಹಸ್ತಗಳಿಂದ ಅವುಗಳಿಗೆ ‘ಮಡಿ’ಯಾಗುವ ಪುಣ್ಯತ್ವ ಪ್ರಾಪ್ತಿ. ಮತ್ತೆ ಮುಂದಿನ ವರ್ಷದ ತನಕ ಅವುಗಳ ನೆಮ್ಮದಿಗೆ ಭಂಗ ಬರುತ್ತಿರಲಿಲ್ಲ.



ಈ ಸಮಯವೇ ರಸಮಯವೆಂದುಕೊಂಡ ನಮ್ಮ ಬಾಲಸೈನ್ಯ, ಹಳ್ಳದ ದಂಡೆಯಲ್ಲಿನ ಮಿಂಚುಗಲ್ಲು ಹೆಕ್ಕುತ್ತ, ಮನದಣಿ ಮೀಯುತ್ತ ಸ್ವರ್ಗಸುಖದಲ್ಲಿ ಲೋಲಾಡುತ್ತಿತ್ತು.

ಅಷ್ಟೊತ್ತಿಗೆ ಹೊಟ್ಟೆ ಚುರುಗುಟ್ಟತೊಡಗುತ್ತಿತ್ತು. ಮನೆಯಿಂದ ತಂದಿದ್ದ ಬುತ್ತಿ ಬಿಚ್ಚಿ, ಹಳ್ಳದ ದಂಡೆಗೆ ಕುಂತು ಊಟಮಾಡುವುದು ಅದೆಷ್ಟು ಛಂದ ಅಂತೀರಿ! ಜೋಳದ ನುಚ್ಚು, ಮೇಲೆ ತಪ–ತಪ ಅನ್ನಬೇಕು ಹಾಗೆ ಕುಸುಬಿ ಎಣ್ಣೆ ಸುರುವಿಕೊಂಡು, ಕೆಂಪು ಮೆಣಸಿನ ಚಟ್ನಿ, ಖಡಕ್ ರೊಟ್ಟಿ ಜತೆ ವ್ಯಂಜನವಾಗಿ ಉಳ್ಳಾಗಡ್ಡಿ, ಸೋಸಿದ ಮೆಂತ್ಯಪಲ್ಯೆ, ಗಜ್ಜರಿ, ಸವತೆ... ಸವಿಯುತ್ತಿದ್ದರೆ! ನೆನಸಿಕೊಂಡರೆ ಈಗಲೂ ಬಾಯಲ್ಲಿ ನೀರು ಒಸರುತ್ತದೆ.

‘ಹರ‍್ಯೊ ನೀರಿಗೂ ಉರ‍್ಯೊ ಬೆಂಕಿಗೂ ಯಾ ದೋಸೂ (ದೋಷ) ಇಲ್ಲಾ’ ಎಂದು ಹೇಳುವ ಹಣ್ಮಂತಪ್ಪನ ಮಾತಿಗೆ ಹೂಂಗುಟ್ಟುತ್ತ, ಹಳ್ಳದ ನೀರನ್ನು ಬಾಯಿಬಟ್ಟಲಿಂದ ಸೊರಕ್... ಸೊರಕ್ ಶಬ್ದದೊಂದಿಗೆ ಆಪೋಶನಮಾಡಿಕೊಳ್ಳುತ್ತಿದ್ದೆವು. ಸಂಜೆಯಾಗುವವರೆಗೆ ಅಲ್ಲೇ ಕುಂತಿದ್ದು, ನಂತರ ಒಂದೊಂದಾಗಿ ಒಣಗಿದ, ಅರೆ ಒಣಗಿದ ಹಾಸಿಗೆಗಳ ಎರಡು ಪ್ರತ್ಯೇಕ ಗಂಟು ಕಟ್ಟಿ, ಹೊತ್ತುಕೊಂಡು ತಂದು, ಅವುಗಳನ್ನು ದೇವರಮನೆಯಲ್ಲಿಟ್ಟರೆ... ಅಲ್ಲಿಗೆ ಸುಣ್ಣಾಯಣದ ಕೊನೆಯ ಅಧ್ಯಾಯ ಮುಗಿದಂತೆ.

ಆ ರಾತ್ರಿ, ಆಳುಗಳಿಗೊಂದಿಗೆ ನಮಗೂ ಭರ್ಜಕ ಸಜ್ಜಕ–ತುಪ್ಪದೂಟ. ಜತೆಗೆ ಉದ್ದಿನ ಹಪ್ಪಳ. ಪೋಟೋಬಾ ಥಣ್ಣಗಾದರೆ, ವಿಠೋಬಾಗೂ ಕಣ್ಣು ಜಗ್ಗುತ್ತದಂತೆ. ಚಾಪೆಯ ಮೇಲೆ, ಅಪ್ಪನ ಹಳೆಯ ಧೋತರ ಹೊದ್ದುಕೊಂಡು ಬಿದ್ದುಕೊಳ್ಳುತ್ತಿದ್ದಂತೆಯೆ, ಸುಣ್ಣಾಟದ ಕೊನೆಯ ಅಂಕ ಮಂಗಳಗೊಂಡಿರೋದು... ಮರುದಿನ ಎಚ್ಚರಾಗೋಕ್ಕುಂಚೇನೆ, ಸೂರ್ಯನ ಬೆಳಕು ಮನೆಯೊಳಗೆ ಬಂದಿರೋದು. ಭಾಸ್ಕರನ ಬೆಳಕು ಸುಣ್ಣದೊಂದಿಗೆ ಪ್ರತಿಫಲಿಸಿ, ಮನೆಗೆ ಹೊಸ ‘ಲುಕ್’ ಪ್ರಾಪ್ತವಾಗಿರೋದು.

ಈ ಸುಣ್ಣಾಟಕ್ಕೆ ಆಗ ನಾವು ಇಟ್ಟ ಸಬ್ ಟೈಟಲ್: ‘ಆಪರೇಶನ್ ವೈಟ್ ಡೈಮಂಡ್’

***

ಸುಣ್ಣದೊಂದಿಗಿನ ಏಕೋಭಾವದ ಬಾಲ್ಯದ ಆ ದಿನಗಳು, ಕಾಲಕೋಶದ ಅವಶೇಷದಂತೆ ನೆನಪಾಗಿ ಉಳಿದಿವೆ. ಈಗಂತೂ ಎಲ್ಲೆಡೆ ಬಣ್ಣದ ಭರಾಟೆ! ಪ್ರಚಾರದ ಸ್ಟಂಟ್‌ನಲ್ಲಿ ಬಣ್ಣದ ಜತೆ ಏಗಲಾರದೆ,